<u>**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**</u>

<u>**SC No**.377/2022</u>

**PW**. 4

**CW**. 4

**ಸಾಕ್ಷಿಯ ಹೆಸರು –ಅನಿಲ್ ಕುಮಾರ ಎಸ್ ಎನ್**

**ತಂದೆಯ ಹೆಸರು –ನಟೇಶ**

**ವಯಸ್ಸು –28 ವರ್ಷಗಳು** ದಿನಾಂಕ <u>19–09–2025</u> ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ವ್ಯವಸಾಯ**

**ವಾಸಸ್ಥಳ –ಸಂಗಶೆಟ್ಟಿಹಳ್ಳಿ, ಪಿರಿಯಾಪಟ್ಟಣ ತಾಃ**

<u>**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**</u>

ಚಾಸಾ–5 ನಮ್ಮ ಊರಿನವರು. ನನ್ನ ಚಿಕ್ಕಪ್ಪನ ಹೆಸರು ಕಾಳಿಂಗೇಗೌಡ. ಆರೋಪಿ ಗೊತ್ತು. ಮೃತ ನಾಗೇಗೌಡನನ್ನು ನಾನು ನೋಡಿಲ್ಲ. ಮೃತ ನಾಗೇಗೌಡ ಯಾವಾಗ ಮತ್ತು ಹೇಗೆ ಮೃತಪಟ್ಟ ನನಗೆ ಗೊತ್ತಿಲ್ಲ. ಆರೋಪಿಯು ನಾಗೇಗೌಡನನ್ನು ಚಾಸಾ–2 ರವರ ಮೋಟರ್ ಸೈಕಲ್ ನಿಂದ ಎಳೆದು ಹಲ್ಲೆ ಮಾಡಿದ್ದನ್ನು ನಾನು ನೋಡಿಲ್ಲ.ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.

(<u>**ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೇಳಿದ್ದು ಸಾಕ್ಷಿಯ ಸಾಕ್ಷ್ಯ ಮತ್ತು ಇತರೆ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**</u>.)

<u>**ಪಾಟೀಸವಾಲುಃ– ಸರ್ಕಾರಿ ಅಭಿಯೋಜಕರಿಂದಃ–**</u>

ದಿಃ 25–06–2022 ರಂದು ಸಂಜೆ 6.30 ಗಂಟೆಗೆ ನಾನು ಮತ್ತು ಚಾಸಾ–5 ರವರು ನಮ್ಮ ಗ್ರಾಮದ ಸರ್ಕಾರಿ ಶಾಲೆಯ ಬಳಿ ಮಾತನಾಡುತ್ತ ನಿಂತಾಗ , ಚನ್ನಂಗೆರೆ ಗ್ರಾಮದ ಕಡೆಯಿಂದ

ಚಾಸಾ–2 ರವರು ನಾಗೇಗೌಡಡನ್ನು ಮೋಟರ್ ಸೈಕಲ್ ನಲ್ಲಿ ಕರೆದುಕೊಂಡು ಬರುತ್ತಿದ್ದು, ಅವರ ಹಿಂಭಾಗ ಆರೋಪಿ ಮೋಟರ್ ಸೈಕಲ್ ನಿಂದ ಬಂದು ಚಾಸಾ–2 ರವರ ಮೋಟರ್ ಸೈಕಲ್ ಅನ್ನು ಅಡ್ಡ ಹಾಕಿ ನಿಲ್ಲಿಸಿ , ನಾಗೇಗೌಡನನ್ನು ಮೋಟರ್ ಸೈಕಲ್ ನಿಂದ ಕೆಳಗೆ ಎಳೆದು ಬಿಳಿಸಿ, ನ್ಯಾಯಾಲಯದ ಮುಂದಿರುವ ಕಲ್ಲಿನಿಂದ ನಾಗೇಗೌಡರ ಕೈ ಗೆ, ಎದೆಗೆ ಹಾಗೂ ಹೊಟ್ಟೆಗೆ ಹಲ್ಲೆ ಮಾಡಿದ ಎಂದರೆ ಸರಿಯಲ್ಲ. ಕೂಡಲೇ ಸ್ಥಳಕ್ಕೆ ಚಾಸಾ–3 ಮತ್ತು 14 ರವರು ಸ್ಥಳಕ್ಕೆ ಬಂದಿದ್ದು, ನಂತರ ಕುಟುಂಬಸ್ಥರು ಸಹ ಸ್ಥಳಕ್ಕೆ ಬಂದು ನಾಗೇಗೌಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ.

ದಿಃ 05–07–2022 ರಂದು ನಾಗೇಗೌಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಚಿಕಿತ್ಸೆ ಫಲಕಾರಿಯಾಗದೇ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಬಗ್ಗೆ ಈಗ ನನಗೆ ಓದಿ ಹೇಳಿದಂತೆ ನಿಪಿ–17 ರಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಪರಿಚಯಸ್ಥನಾದ ಕಾರಣ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್ ಪಿ ವಕೀಲರಿಂದಃ–**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.